The Resource Centre

# *Press Clipping*


**Publication** : **Prajavani**

**Date** : **June 10, 2016**

**Edition** : **State**

**Page** : **4, Chandanavana**




# ಭಾವನಾ– ಅಪೂರ್ವ ಹೊಸ ಹಾಡು!

ಅಪೂರ್ವ ಕಾಸರವಳ್ಳಿ ನಿರ್ದೇಶನದ ‘ನಿರುತ್ತರ’ ಚಿತ್ರದ ಹಾಡುಗಳು ಇತ್ತೀಚೆಗೆ ಅನಾವರಣಗೊಂಡವು. ಪತ್ರಿಕಾಗೋಷ್ಠಿಗೆಂದೇ ಪತ್ರಕರ್ತರು, ಚಿತ್ರತಂಡದವರು ಸೇರಿದ್ದರೂ ಯೋಜಿತ ಪತ್ರಿಕಾಗೋಷ್ಠಿಯ ಔಪಚಾರಿಕತೆ ಅಲ್ಲಿರಲಿಲ್ಲ. ಮಬ್ಬುಗತ್ತಲೆಯಲ್ಲಿ ಗೋಡೆಯ ಮೇಲೊಂದು ಚಿಕ್ಕ ಪರದೆ ಹಾಕಿ, ಅಲ್ಲಿ ಚಿತ್ರದ ಟ್ರೈಲರ್ ಮತ್ತು ಹಾಡುಗಳನ್ನು ತೋರಿಸಲಾಯಿತು. ಅಂಬರೀಷ್, ದರ್ಶನ್ ಕಾರ್ಯಕ್ರಮದ ಆಕರ್ಷಣೆಯ ಕೇಂದ್ರವಾಗಿದ್ದರು.

‘ಚಿತ್ರರಂಗಕ್ಕೆ ಹೊಸಬರು ಬರುತ್ತಿರುವುದು ಆಶಾದಾಯಕ ಬೆಳವಣಿಗೆ. ಕಲಾವಿದೆಯೊಬ್ಬರು ಸಿನಿಮಾ ನಿರ್ಮಾಣಕ್ಕೆ ಮುಂದಾಗಿದ್ದಾರೆ. ಅವರಿಗೆ ಶುಭವಾಗಲಿ’ ಎಂದು ಅಂಬರೀಷ್ ಹಾರೈಸಿದರು. ನಟಿ ಭಾವನಾ ರಾಮಣ್ಣ ಚಿತ್ರದ ನಿರ್ಮಾಪಕಿ. ತಮ್ಮ ಸಹೋದರ ಅರವಿಂದ್ ರಾಮಣ್ಣ ಅವರೊಂದಿಗೆ ಸೇರಿ ‘ಹೋಮ್ ಟೌನ್ ಪ್ರೊಡಕ್ಷನ್’ ಸಂಸ್ಥೆ ಅಡಿಯಲ್ಲಿ ಅವರು ಸಿನಿಮಾ ನಿರ್ಮಾಣ ಮಾಡಿದ್ದಾರೆ.

ಕಲಾತ್ಮಕ ಚಿತ್ರಗಳ ನಿರ್ದೇಶಕ ಗಿರೀಶ್ ಕಾಸರವಳ್ಳಿ ಅವರ ಪುತ್ರ ಅಪೂರ್ವ ಕಾಸರವಳ್ಳಿ ಈಗಾಗಲೇ ತಂದೆಯ ಜೊತೆ ಒಂದು ಸಿನಿಮಾದಲ್ಲಿ ಕೆಲಸ ಮಾಡಿದ ಅನುಭವ ಪಡೆದಿದ್ದಾರೆ. ಮೊದಲ ಬಾರಿ ಸ್ವತಂತ್ರ ನಿರ್ದೇಶನಕ್ಕೆ ಮುಂದಾಗಿರುವ ಅವರು, ತಮ್ಮ ಮೊದಲ ಚಿತ್ರಕ್ಕೆ ಕತೆಗಾರ ವಿಕ್ರಮ್ ಹತ್ವಾರ್ ಅವರ ಕಥೆಯನ್ನು ಆಯ್ದುಕೊಂಡಿದ್ದಾರೆ. ನಾಲ್ಕು ಪಾತ್ರಗಳ ಮಧ್ಯೆ ನಡೆಯುವ ಘಟನೆಗಳು, ಕಥನಗಳು ಮತ್ತು ಸಂಕೀರ್ಣ ಸಂಬಂಧದ ಎಳೆಯನ್ನು ಕಥೆಯಲ್ಲಿ ಕಟ್ಟಿಕೊಡಲಾಗಿದೆ. ಅದನ್ನು ಸಿನಿಮಾಕ್ಕೆ ಬೇಕಿರುವ ನಾಟಕೀಯ ತಿರುವುಗಳ ಮೂಲಕ ನಿರೂಪಿಸಿದ್ದಾರೆ ಅಪೂರ್ವ ಕಾಸರವಳ್ಳಿ.

ನೀಲಾದ್ರಿ ಕುಮಾರ್ ಮೊದಲ ಬಾರಿಗೆ ಕನ್ನಡ ಚಿತ್ರವೊಂದಕ್ಕೆ ಸಂಗೀತ ಸಂಯೋಜನೆ ಮಾಡಿದ್ದಾರೆ. ಅವರ ಸಂಗೀತದಲ್ಲಿ ಏಳು ಹಾಡುಗಳು ಮೂಡಿಬಂದಿದ್ದು ಕವಿರಾಜ್ ಎಲ್ಲ ಹಾಡುಗಳನ್ನು ಬರೆದಿದ್ದಾರೆ. ಅರ್ಜುನ್ ನಾಯರ್, ಜೂನ್ ಬ್ಯಾನರ್ಜಿ, ಸಾವನಿ ಮುದಗಲ್, ಮೋಹನ್, ಜೋನಿತ ಗಾಂಧಿ, ಬಾಲಚಂದ್ರ ಪ್ರಭು, ಅಂಕಿತ ಮತ್ತು ನೀಲಾದ್ರಿ ಕುಮಾರ್ ಹಾಡಿದ್ದಾರೆ. ಚಿತ್ರದ ಹಾಡುಗಳು ಕನ್ನಡ ಚಿತ್ರರಂಗದಲ್ಲಿ ಬಹಳ ಕಾಲ ಉಳಿಯಲಿವೆ ಎಂದು ಹಾಡುಗಳ ಹಕ್ಕು ಖರೀದಿಸಿದ ಲಹರಿ ವೇಲು ಅಭಿಪ್ರಾಯಪಟ್ಟರು. ಗಿರೀಶ್ ಕಾಸರವಳ್ಳಿ, ವಿ. ಮನೋಹರ್, ನಟ ಆದಿತ್ಯ, ಯೋಗಿ, ಸಂಚಾರಿ ವಿಜಯ್ ಮುಂತಾದವರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ರಾಹುಲ್ ಬೋಸ್, ಐಂದ್ರಿತಾ ರೇ, ಭಾವನಾ, ಕಿರಣ್ ಶ್ರೀನಿವಾಸ್ ಚಿತ್ರದ ಮುಖ್ಯ ಪಾತ್ರಗಳಲ್ಲಿದ್ದಾರೆ. ಎಚ್.ಎಂ. ರಾಮಚಂದ್ರ ಛಾಯಾಗ್ರಹಣ ಹಾಗೂ ಅಂತರರಾಷ್ಟ್ರೀಯ ಖ್ಯಾತಿಯ ರಸೂಲ್ ಪೂಕುಟ್ಟಿ ಶಬ್ದಗ್ರಹಣ ಚಿತ್ರಕ್ಕಿದೆ. ಚಿತ್ರ ಸದ್ಯದಲ್ಲೇ ಪ್ರೇಕ್ಷಕರ ಮುಂದೆ ಬರಲಿದೆ.

❖